ಹುಡುಗ ಚಾಲು ಹೇಗಾದ ಎನ್ನುವುದು ವಿಶೇಷವೇ ಅಂತ ಕಂಡಿತು ನನಗೆ.

ಮೂಗು ಮುಚ್ಚಿಕೊಳ್ಳುವಷ್ಟು ವಾಸನೆ ಬಡಿಯಿತು. ಉಲ್ಲಾಸನಗರ ಸ್ಟೇಶನ್ ದಾಟಿ ಅಂಬರನಾಥ ಸಮೀಪಿಸುತ್ತಿರಬೇಕು. ಅದು ದಾಟಿ ಮುಂದೆ ಹೋಗುವವರೆಗೆ ಉಸಿರು ಕಟ್ಟಿ ಕೂರಬೇಕಷ್ಟೆ. ಆಮೇಲೆ ನಿರಾಳ. ಅಕ್ಕಪಕ್ಕದವರಾರಿಗೂ ವಾಸನೆ ಬಡಿಯುತ್ತಿಲ್ಲವೇನೋ! ಏನೂ ತಿಳಿಯದವರಂತೆ ಕೂತಿದ್ದಾರೆ, ಕೊಳದ ಮಧ್ಯೆ ಧ್ಯಾನಸ್ಥವಾಗಿ ನಿಂತ ಕೊಕ್ಕರೆಯ ಹಾಗೆ. ನಿತ್ಯ ಪ್ರಯಾಣಿಸುವವರಿರಬೇಕು, ಇವರ ಮೂಗು ವಾಸನೆಗೆ ಹೊಂದಿಕೊಂಡು ಬದುಕಲು ಕಲಿತಿರಬೇಕು. ನಾನು ಮೂಗನ್ನು ರುಮಾಲಿನಿಂದ ಮುಚ್ಚಿ ಹಿಡಿದು ಕೂತೆ. ''ಇವನೊಬ್ಬ ಹೊಸಬನಿರಬೇಕು'' ಎಂದುಕೊಂಡರೇನೋ! ಈ ವಾಸನೆಯ ನಡುವೆಯೂ ಸ್ಟೇಶನ್ನಿನಲ್ಲಿ ವಡಾಪಾವಿನ ವ್ಯಾಪಾರ ಜೋರಾಗಿಯೇ ನಡೆಯುತ್ತಿತ್ತು. ನಮ್ಮ ಲೋಕಲ್ಲು ಪ್ಲಾಟ್‌ಫಾರ್ಮಿಗೆ ಬಂದು ನಿಂತಾಗಲೇ ಅದನ್ನು ಮಾರುವ ಜನಗಳು ಓಡೋಡಿ ಬಂದು, ''ವಡೇ...ವಡೇ...ಗರಮಾ ಗರಮ್ ವಡೇ'' ಎಂದು ಅರಚುತ್ತಾ ಗಿರಾಕಿಗಳನ್ನು ಸೆಳೆಯುತ್ತಿದ್ದರು. ಕಂಪನಿಯಲ್ಲೂ ವಾರಕ್ಕೊಮ್ಮೆ ಉಪಾಹಾರದ ಸಮಯದಲ್ಲಿ ವಡಾಪಾವ್ ಸಿಗುತ್ತಿತ್ತು. ಅಂತಹ ದಿನಗಳಲ್ಲಿ ಸುಭಾಷ್ ನನ್ನ ಟೇಬಲ್ಲಿಗೆ ತಪ್ಪದೇ ಹಾಜರಾಗುತ್ತಿದ್ದ. ''ಮೂರ್ತಿ ಸಾಬ್, ಕೂಪನ್ ಕೊಡಿ. ನಿಮಗೂ ತಂದು ಕೊಡ್ತೇನೆ'' ಎನ್ನುತ್ತಾ ಕ್ಯಾಂಟೀನು ಕೂಪನ್ನು ಪಡೆದುಕೊಂಡು ಏಳೋ ಎಂಟೋ ವಡಾಪಾವ್ ಕಟ್ಟಿಸಿಕೊಂಡು, ನನಗೆ ಒಂದು ವಡಾಪಾವಿನೊಂದಿಗೆ ಚಹಾವನ್ನೂ ತಂದು ಕೊಡುತ್ತಿದ್ದ. ಮೆದುವಡೆ, ಉಪ್ಮ, ಬಜ್ಜಿ ಮಾಡಿದ ದಿನ ಈ ಸೌಲಭ್ಯ ಇರ್ತಾ ಇರ್ಲಿಲ್ಲ. ಇದನ್ನು ಗಮನಿಸಿದ್ದ ದೀಪಕ್ ಒಮ್ಮೆ, ''ಏನು ಮಾಡಬೇಕು ಇವ, ತಿನ್ನುವ ಚಪಲ ಬಿಡಲಾರ. ಅಪ್ಪ ಕೂಪನಿಗಾಗುವಷ್ಟು ಮಾತ್ರ ಹಣ ಕೊಡೋದು'' ಅಂದಿದ್ದ. ಹೀಗೂ ಇರ್ತಾರೆ ಅನ್ನುವುದನ್ನು ನಾನು ಒಪ್ಪಲೇ ಬೇಕಾಯಿತು. ಅಕ್ಕಪಕ್ಕದಲ್ಲೊಮ್ಮೆ ಕಣ್ಣು ಹಾಯಿಸಿದೆ. ಇನ್ನೇನು ಬದಲಾಪುರ ಸಮೀಪಸುತ್ತಿರಬೇಕು, ಎರಡೂ ಬದಿ ಅಪಾರ್ಟ್‌ಮೆಂಟುಗಳು ಕಾಣತೊಡಗಿದವು. ಈಸ್ಪಿನಲ್ಲಿ

